ಕಾಲದಾಚೆಗೆ ತಂದು ನಿಲ್ಲಿಸುವ ರೀತಿಯಲ್ಲಿ ಈ ಕಥನಗಳು ನಿರ್ಮಿತಗೊಂಡಿವೆ. ಮೂಲಪುರಾಣಗಳು ಸದ್ಯದ ಸಂಕಟಗಳನ್ನು ತಮ್ಮ ಸ್ಮೃತಿಕೋಶದಲ್ಲಿ ಹುದುಗಿಸಿಕೊಂಡಿರುತ್ತವೆ. ಅವುಗಳ ಅನಾವರಣ ಮತ್ತು ಅವುಗಳಿಗೆ ಪರಿಹಾರಗಳನ್ನು ಹುಡುಕುವ ದಾರಿಯಲ್ಲಿ ಕೇಬಿಯವರ ಕಾವ್ಯ ರೂಪುಗೊಂಡಿರುವುದನ್ನು ಕಾಣಬಹುದು.

ಕೇಬಿಯವರ ಕಾವ್ಯದುದ್ದಕ್ಕೂ ಮುಟ್ಟಿಸಿಕೊಳ್ಳಲಾಗದವರ ಮತ್ತು ಹೆಸರು ಹೇಳಿಕೊಳ್ಳಲಾಗದ ಜನಾಂಗದವರ ದನಿಯಾಗುವ ಉಮೇದುವಾರಿಕೆ ಮತ್ತು ಸಿದ್ಧಪುರಾಣಗಳನ್ನು ಒಡೆಯುವ ಇರಾದೆಯಿದೆ. 'ಮುಟ್ಟಬಾರದ ಕೂಸಿಗೆ ಹೆಸರಕೊಡಿ' ಎನ್ನುವುದು ಇವರ ಕಾವ್ಯದ ಮುಖ್ಯವಾದ ನೆಲೆ. ಅದು ಅಂಗಲಾಚುವಿಕೆಯಾಗದೆ ಈ ನೆಲದ ನಿರ್ಮಾತೃಗಳು ಮುಟ್ಟಬಾರದ ಕೂಸಾಗಿದ್ದರೂ ನೆಲವ ಮುಟ್ಟಿ ಗಟ್ಟಿಮಾಡಿ ಇತರ ಜೀವ ಸಂಕುಲಗಳಿಗೆ ಆಶ್ರಯ ನೀಡಿದವರ ಆಕ್ರಂದನವಾಗಿದೆ. ಬಕಾಲನ ಮೂಲಕ ಹೊಸಲೋಕಸೃಷ್ಟಿಯ ಮಾದರಿಯೊಂದು ತೆರೆಯಲ್ಪಡುತ್ತದೆ. ಅದಕ್ಕೆ ಈ ನೆಲ ನನ್ನದು ಎಂಬ ಪಾರಂಪರಿಕ ನಂಬುಗೆಯಿದೆ. ತನ್ನ ನೆಲದಲ್ಲಿ ತಾನೇ ಮುಟ್ಟಬಾರದವನಾದುದಕ್ಕೆ ಮುಂದಿಟ್ಟ ಕಾರಣಗಳ ಪೊಳ್ಳುತನವನ್ನು ಬಿಚ್ಚಿ ಹರಡುತ್ತದೆ. ಮುಟ್ಟು ಎಂಬುದು ಈ ಸಮಾಜದಲ್ಲಿ ಉಂಟು ಮಾಡಿರುವ ಶೋಷಣೆಯ ಆಯಾಮವನ್ನು ತನ್ನ ಪರಂಪರೆಯ ಕಣ್ಣಿನಲ್ಲಿ ನೋಡಿ ಅದಕ್ಕೆ ಆಕ್ರೋಶವನ್ನು ವ್ಯಕ್ತಪಡಿಸುವ ಜೊತೆಗೆ, ಅದನ್ನು ನಿವಾರಿಸಿಕೊಳ್ಳುವ ದಾರಿಯನ್ನು ಕಂಡುಕೊಳ್ಳುವ ಯತ್ನವನ್ನು ಮಾಡುತ್ತದೆ. ಗಲ್ಲೆಬಾನಿಯ ಆಂತರ್ಯದಲ್ಲೂ ಇದೇ

## ಸಾಹಿತ್ಯ ಶ್ರೇಷ್ಠತೆಯ ಕುರುಹು

'ಬಕಾಲ' ಕೆ.ಬಿ. ಸಿದ್ದಯ್ಯ ಬರೆದಿರುವ ಈ ಕಾಲದ ಮಹತ್ವದ ಕವಿತೆ. ತಾನು ಮುಟ್ಟಬಾರದವನಾದ ಬಳಿಕ, ಏನನ್ನು ಮುಟ್ಟಬೇಕು? ಯಾವುದಕ್ಕೆ ಲಗ್ಗೆ ಹಾಕಿದರೆ ಸಿಕ್ಕಲಾರದವನು ಸಿಕ್ಕಿಯಾನು? ಎಂಬ ಜಿಜ್ಞಾಸೆಯ ಧ್ಯಾನ 'ಬಕಾಲ' ಕವಿತೆಯ ಮುಖ್ಯ ತುಡಿತ. ಕಾಣಲಾರದ್ದನ್ನು ಕಂಡದ್ದರ ಮೂಲಕ ಕಂಡದ್ದನ್ನು ಕಾಣಲಾಗದ್ದರೊಂದಿಗಿನ ತಲಬನ್ನು ಎಚ್ಚರದ ಸಮಕಾಲೀನ ಕವಿ ಹೇಗೆ ಕಾಣಿಸುತ್ತಾನೆ ಎಂಬುದಕ್ಕೆ 'ಬಕಾಲ' ಒಂದು ಶ್ರೇಷ್ಠ ಕಾಣಿಕೆ. ಮುಟ್ಟಲಾರದ ಬಕಾಲನೊಂದಿಗೆ ಕವನದ ನಾಯಕ ನಡೆಸುವ ನಿರಂತರ ಶೋಧ – ಕೆಳಸ್ತರದ ಚೇತನವೊಂದರ ಜೀವಂತ ಬೀಜಸತ್ವಕ್ಕೆ ಬಡ್ಡಿಯ ಭಿತ್ತಿ. ಜೀವಸತ್ವದ ಮೂಲಕ ನಡೆಸುವ ಅರ್ಥಪೂರ್ಣ ಮುಖಾಮುಖಿಗೆ ಯಾವುದು ತಾನೇ ಅಡ್ಡಿ?

ಸಿದ್ಧಲಿಂಗಯ್ಯನವರ 'ಅಲ್ಲೆ ಕುಂತವರೆ' ದೇವನೂರ ಮಹಾದೇವ ಅವರ 'ಕುಸುಮಬಾಲೆ', ಕೆ.ಬಿ. ಸಿದ್ದಯ್ಯನವರ 'ಬಕಾಲ' ದಲಿತ ಸಂವೇದನೆಯಲ್ಲಿ ಶೋಧಿತವಾಗಿ ಬಂದಿರುವ ಮಹತ್ವದ ಚಿಂತನ ಕೃತಿಗಳು. ದಲಿತ ಸಾಹಿತ್ಯ ಸಂವೇದನೆ ಎಂದರೆ ಅದೊಂದು ಭಾವ ನಿರ್ಭರತೆಯ ಹಳಹಳಿಕೆ ಮಾತ್ರ ಅಲ್ಲ ಎಂಬುದನ್ನು ಈ ಕೃತಿಗಳು ಮನಗಾಣಿಸುತ್ತವೆ. ಆಕ್ರೋಶ, ಉದ್ರೇಕ, ಸಿಟ್ಟು–ಸೆಡುವುಗಳನ್ನು ಅರ್ಥಪೂರ್ಣ ಶೋಧಕ್ಕೆ ಹಚ್ಚುವುದರಿಂದ ಎಂಥ ವ್ಯಾಪಕ ಅರ್ಥವಲಯಗಳನ್ನು ಏರಬಹುದೆಂಬುದಕ್ಕೆ ಇಂಥ ಕೃತಿಗಳು ಜೀವಂತ ಪುರಾವೆ. ದಲಿತ ಸಂವೇದನೆಯ ಎಲ್ಲ ಗುಣಗಳನ್ನು ಎಂದರೆ ನೆಲದ ಸತ್ವವನ್ನು, ಜೀವದ ಗುಣವನ್ನು, ಸಂಸ್ಕೃತಿಯ ಸಾತತ್ಯವನ್ನು ಒಗ್ಗೂಡಿದ ಅಭಿವ್ಯಕ್ತಿಯಾಗಿಸುವ ಇಂಥ ಸಾಧನೆಗಳು ಯಾವುದೇ ಭಾಷೆಯ ಸಾಹಿತ್ಯದ ಶ್ರೇಷ್ಠತೆಯ ನಿಜವಾದ ಕುರುಹುಗಳು.'

**● ಕಿ.ರಂ. ನಾಗರಾಜ**